ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 50॥ UDP/1263/2018-20 || R.NO.50495/91 ॥ ತಾರೀಕು : 08–01–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಕೋಟೇಶ್ವರದಲ್ಲಿ ರೋಟರಿ ಜಿಲ್ಲಾ ಸಮ್ಮೇಳನ

# ಸಕಾರಾತ್ಮಕ ಚಿಂತನೆಯಿಂದ ನೆಮ್ಮದಿ

### ಶ್ರೀ ಸುಖಭೋದಾನಂದ ಸ್ವಾಮೀಜಿ



ಶ್ರೀ ಸುಖಭೋದಾನಂದ ಸ್ವಾಮೀಜಿ ಮಾತಾಡುತ್ತಿರುವುದು

ಜೀವನದಲ್ಲಿ ಸಕಾರಾತ್ಮಕವಾಗಿ ಚಿಂತಿಸುತ್ತಾ, ಇಂದಿನ ದಿನದ ಆನಂದ ಅನುಭವಿಸುತ್ತಾ ಮನಸ್ಸನ್ನು ನಿರ್ಮಲವಾಗಿಸಿಕೊಂಡರೆ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ. ನಮ್ಮ ಮನಸ್ಸಿಗೆ ನಾವೇ ಪ್ರೇರಣೆ ತುಂಬಿಕೊಂಡು ಕಷ್ಟಗಳು ಬಂದಾಗಲೂ ಅದನ್ನು ಪರಿಹರಿಸಿಕೊಳ್ಳುವ ಆತ್ಮಶಕ್ತಿಯನ್ನು ಬೆಳೆಸಿಕೊಂಡರೆ ಸಂತೋಷದಿಂದ ಇರಲು ಸಾಧ್ಯವಾಗುತ್ತದೆ. ಕೊಡುವುದನ್ನು ಕಲಿತುಕೊಂಡರೆ, ಅಗತ್ಯವುಳ್ಳವರಿಗೆ ಸಹಾಯ ಮಾಡುವುದನ್ನು ಶ್ರದ್ಧೆಯಿಂದ ಅನುಭವಿಸಿದರೆ ಬದುಕು ಸಾರ್ಥಕವಾಗುತ್ತದೆ" ಎಂದು ಖ್ಯಾತ ವಾಗ್ಮಿ, ದಾರ್ಶನಿಕ ಶ್ರೀ ಸುಖಭೋದಾನಂದ ಸ್ವಾಮೀಜಿಯವರು ಹೇಳಿದರು.

ಕೋಟೇಶ್ವರದ ಯುವಮೆರಿಡಿಯನ್ ಕನ್ವೆನ್‌ಶನ್ ಸೆಂಟರ್‌ನಲ್ಲಿ ಜ.5 ರಂದು ನಡೆದ ರೋಟರಿ ಜಿಲ್ಲೆ 3182ರ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಮಾರಂಭದಲ್ಲಿ ನೆರೆದ 1800ಕ್ಕೂ ಹೆಚ್ಚು ರೋಟರಿ ಕುಟುಂಬದವರನ್ನು ತಮ್ಮ ಮಾತುಗಳಿಂದ ಉಲ್ಲಸಿತರನ್ನಾಗಿ ಮಾಡಿದ ಸ್ವಾಮೀಜಿ, "ಜೀವನದ ಪ್ರತಿಯೊಂದು ಕ್ಷಣವನ್ನು ವ್ಹಾ ವ್ಹಾ ಎಂದೇ ಸ್ವೀಕರಿಸಿ, ನಗು, ಪ್ರೀತಿ, ವಾತ್ಸಲ್ಯ , ನಾನು ಗೆಲ್ಲುತ್ತೇನೆ ಎಂಬ ಆತ್ಮವಿಶ್ವಾಸ ಮೂಡಿಸಿಕೊಳ್ಳಿ, ನಾಳೆಯ ಬಗ್ಗೆ ಚಿಂತೆ ಮಾಡುತ್ತಾ ಇಂದಿನ ಆನಂದ ಕಳೆದುಕೊಳ್ಳಬೇಡಿ" ಎಂದು ಹಲವು ಘಟನೆಗಳನ್ನು ಉದಾಹರಣೆಯಾಗಿ ಪ್ರಸ್ತಾಪಿಸುತ್ತ ಹೇಳಿದರು.

ರೋಟರಿ ಸದಸ್ಯರಾಗಿ ಸಮಾಜಕ್ಕೆ ದೊಡ್ಡ ಸೇವೆ ಮಾಡುತ್ತಿದ್ದೀರಿ, ಈ ಅಭಿಯಾನ ಯಶಸ್ವೀಯಾಗಲಿ " ಎಂದು ಶುಭಹಾರೈಸಿದರು.

ರೋಟರಿ ಜಿಲ್ಲಾ ಗವರ್ನರ್ ಅಭಿನಂದನ ಶೆಟ್ಟಿ ಅಧ್ಯಕ್ಷತೆ ವಹಿಸಿ, ಸಮ್ಮೇಳನ ಉದ್ದೇಶ ವಿವರಿಸಿದರು.

ರೋಟರಿ ಜಿಲ್ಲಾ ಸಮ್ಮೇಳನ ಸಮಿತಿ ಅಧ್ಯಕ್ಷ ಡಾ.ಉಮೇಶ್ ಪುತ್ರನ್ ಸ್ವಾಗತಿಸಿದರು.

ಅಂತಾರಾಷ್ಟ್ರೀಯ ರೋಟರಿ ಅಧ್ಯಕ್ಷರ ಪ್ರತಿನಿಧಿ ಭರತ ರೆಡ್ಡಿ ರೋಟರಿ ಜಗತ್ತಿನಲ್ಲಿ ಹೊಂದಿರುವ ಕೀರ್ತಿಯ ಹಿನ್ನೆಲೆ ವಿವರಿಸಿದರು.

ಸಮ್ಮೇಳನದ ಸಲಹೆಗಾರರಾದ ಜಿ.ಸಂತೋಷ ಕುಮಾರ ಶೆಟ್ಟಿ, ಶ್ರೀಮತಿ ಅನು ಭರತ ರೆಡ್ಡಿ, ಶ್ರೀಮತಿ ನೀತಾ ಅಭಿನಂದನ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಗಣೇಶ ಶೆಟ್ಟಿ ಮೊಳಹಳ್ಳಿ , ಶ್ರೀನಾಥ ರಾವ್, ಸತೀಶ ಶೇರೆಗಾರ ಹಾಗೂ ರೋಟರಿ ಜಿಲ್ಲೆಯ ಅಸಿಸ್ಟೆಂಟ್ ಗವರ್ನರ್‌ಗಳು, ಕುಂದಾಪುರ ರೋಟರಿ ದಕ್ಷಿಣದ ಅಧ್ಯಕ್ಷ ಜಾನ್ಸನ್ ಡಿ' ಆಲ್ಮೇಡಾ ಹಾಗೂ ವಲಯ 1, 2ರ ಎಲ್ಲಾ ರೋಟರಿ ಕ್ಲಬ್ ಅಧ್ಯಕ್ಷರು ಉಪಸ್ಥಿತರಿದ್ದರು.

ಶ್ರೀಮತಿ ಪದ್ಮನಿ ಶಾಂತಾರಾಮ ಪ್ರಭು ಪ್ರಾರ್ಥನಾ ಗೀತೆ ಹಾಡಿದರು. ಸಮ್ಮೇಳನ ಸಮಿತಿ ಕಾರ್ಯದರ್ಶಿ ವಿವಿಯನ್ ಕ್ರಾಸ್ತಾ ವಂದಿಸಿದರು.

ನಂತರ ನಡೆದ ಅಧಿವೇಶನದಲ್ಲಿ "ರಾಜಕೀಯ ಮತ್ತು ಸಮಾಜ"ದ ವಿಷಯದಲ್ಲಿ ಕರ್ನಾಟಕದ ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮಾತನಾಡಿದರು.

ಶಿವಮೊಗ್ಗದ ಮಾನಸ ನರ್ಸಿಂಗ್ ಹೋಮ್‌ನ ಮುಖ್ಯಸ್ಥರಾದ ಡಾ| ರಜನಿ ಅಶೋಕ ಪೈಯವರನ್ನು ಗೌರವಿಸಲಾಯಿತು.

"ಸೇವೆ ಜೀವನದ ಅವಿಭಾಜ್ಯ ಅಂಗ" ಎಂಬ ವಿಷಯದ ಬಗ್ಗೆ ಎಂ.ಆರ್. ಪಿ.ಎಲ್.ನ ಮಾನವ ಸಂಪನ್ಮೂಲ ವಿಭಾಗದ ಚೀಫ್ ಜನರಲ್ ಮೆನೇಜರ್ ಲಕ್ಷ್ಮೀ ಎಂ. ಕುಮಾರನ್ ಮಾತನಾಡಿದರು.



ರೋಟರಿ ಜಿಲ್ಲಾ ಗವರ್ನರ್ ಅಭಿನಂದನ್ ಶೆಟ್ಟಿ

**'ಧಾರಾವಿ ತಂಡದ ಆಕರ್ಷಕ ಪ್ರದರ್ಶನ :**

ಮುಂಬೈಯ "ಧಾರಾವಿ ಮ್ಯೂಸಿಕಲ್ ಬ್ಯಾಂಡ್" ತಂಡದ ಯುವಕರು ಮಧ್ಯಾಹ್ನ ಆಕರ್ಷಕ ಪ್ರದರ್ಶನ ನೀಡಿದರು.

(12ನೇ ಪುಟಕ್ಕೆ)

# ಡಾ| ಎಂ.ಎನ್.ರಾಜೇಂದ್ರ ಕುಮಾರ್ ಸಾರ್ಥಕ ಸೇವೆಯ ಬೆಳ್ಳಿಹಬ್ಬ



ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಡಾ| ಎಂ.ಎನ್.ರಾಜೇಂದ್ರ ಕುಮಾರ್ ಅವರ ಸಾರ್ಥಕ ಸೇವೆಯ ರಜತ ಸಂಭ್ರಮಕ್ಕೆ ವ್ಯವಸ್ಥಿತ ತಯಾರಿ ನಡೆದಿದ್ದು ಮಂಗಳೂರಿನ ನೆಹರೂ ಮೈದಾನದಲ್ಲಿ ಜ.19 ರಂದು ನಡೆಯಲಿದೆ.

ದ.ಕ. ಉಡುಪಿ ಹಾಗೂ ನೆರೆಯ ಜಿಲ್ಲೆಗಳಿಂದ ಸುಮಾರು 2 ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆ ಇರುವ ಈ ಸಮಾವೇಶದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ. ಕುಮಾರ ಸ್ವಾಮಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ| ಡಿ.ವೀರೇಂದ್ರ ಹೆಗ್ಗಡೆ, ಭಾಗವಹಿಸಲಿದ್ದು, ರಾಷ್ಟ್ರ , ರಾಜ್ಯಮಟ್ಟದ ಗಣ್ಯರು , ಸಚಿವರು ಈ ಸಮಾವೇಶದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದು ಅಭಿನಂದನೆ ಸಲ್ಲಿಸಲಿದ್ದಾರೆ.

ಡಾ| ಎಂ.ಎನ್.ರಾಜೇಂದ್ರ ಕುಮಾರ್ ಅವರ ಸಾರ್ಥಕ ಸೇವೆಯ ಬೆಳ್ಳಿಹಬ್ಬದೊಂದಿಗೆ ಸಹಕಾರಿ ಮ್ಯೂಸಿಯಂ , ಸಹಕಾರಿ ಗ್ರಂಥಾಲಯ ಉದ್ಘಾಟನೆಗೊಳ್ಳಲಿದೆ. ವಿಚಾರಗೋಷ್ಠಿಗಳು ನಡೆಯಲಿವೆ.

ಮಂಗಳೂರಿನಲ್ಲಿ ಸಚಿವ ಯು.ಟಿ ಖಾದರ್ ಆಹ್ವಾನ ಪತ್ರಿಕೆ ಬಿಡುಗಡೆಗೊಳಿಸಿದ್ದಾರೆ. ಶಾಸಕ ವೇದವ್ಯಾಸ ಕಾಮತ್ ಮುಖ್ಯ ಅತಿಥಿಗಳಾಗಿದ್ದರು. ಅಭಿನಂದನ ಸಮಿತಿ ಅಧ್ಯಕ್ಷ ಐಕಳಭಾವ ದೇವಿ ಪ್ರಸಾದ ಶೆಟ್ಟಿ, ಎಲ್ಲರ ಸಹಕಾರ ಕೋರಿದರು.

ದ.ಕ.ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ರವಿರಾಜ ಹೆಗ್ಡೆ, ಕರ್ನಾಟಕ, ಮೀನುಮಾರಾಟ ಮಹಾಮಂಡಲದ ಅಧ್ಯಕ್ಷ ಯಶಪಾಲ ಸುವರ್ಣ, ಸವಣೂರು ಸೀತಾರಾಮ ರೈ, ಪ್ರಧಾನ ಕಾರ್ಯದರ್ಶಿ ಸದಾಶಿವ ಉಳ್ಳಾಲ, ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿ, ಎಸ್.ಸಿ.ಡಿ.ಸಿ.ಸಿ ಬ್ಯಾಂಕ್ ಉಪಾಧ್ಯಕ್ಷ ವಿನಯಕುಮಾರ್ ಸೂರಿಂಜೆ ಉಪಸ್ಥಿತರಿದ್ದರು. ಶಶಿಕುಮಾರ್ ನಿರೂಪಿಸಿದರು.

ಜನವರಿ – 19




